**Date : 30/08/2021**

# ಎಂಆರ್ ಎನ್ ಆಯುರ್ವೇದಿಕ್ ಮೆಡಿಕಲ್ ಕಾಲೇಜು,ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ ಬಾಗಲಕೋಟೆ

ಸನ್ಮಾನ್ಯ ಶ್ರೀ ಮುರುಗೇಶ ಆರ್ ನಿರಾಣಿ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಕರ್ನಾಟಕ ಸರ್ಕಾರ ಇವರ 56ನೇ ಹುಟ್ಟುಹಬ್ಬದ ಪ್ರಯುಕ್ತ ಎಂ ಎಂ ಜೋಶಿ ನೇತ್ರ ವಿಜ್ಞಾನ ಸಂಸ್ಥೆ ಹುಬ್ಬಳ್ಳಿ ಇವರ ಸಹಯೋಗದಲ್ಲಿ ಎಂಆರ್ ಎನ್ ನಿರಾಣಿ ಫೌಂಡೇಶನ್ ಮತ್ತು ಎಂಆರ್ ಎನ್ ಆಯುರ್ವೇದಿಕ್ ಮೆಡಿಕಲ್ ಕಾಲೇಜು, ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ ನವನಗರ ಬಾಗಲಕೋಟೆ ಇವರ ಸಂಯುಕ್ತ ಆಶ್ರಯದಲ್ಲಿ ದಿನಾಂಕ 27-08-2021 ರಿಂದ 29-08-2021 ರ ವರೆಗೆ ಎಂಆರ್ ಎನ್ ಆಯುರ್ವೇದಿಕ್ ಮೆಡಿಕಲ್ ಕಾಲೇಜು,ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ ನವನಗರ- ಬಾಗಲಕೋಟೆಯಲ್ಲಿ ನಡೆದ ಉಚಿತ ನೇತ್ರ ಚಿಕಿತ್ಸಾ ಶಿಬಿರದ ಸಮಾರೋಪ ಸಮಾರಂಭ ಕಾಲೇಜಿನ ಅಂಗಳದಲ್ಲಿ ನಡೆಯಿತು.

ಸಮಾರಂಭದ ಅಧ್ಯಕ್ಷ ಸ್ಥಾನವನ್ನು ಮಾಜಿ ಜಿ ಪಂ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಹೂವಪ್ಪ ರಾಠೋಡ ವಹಿಸಿಕೊಂಡಿದ್ದರು. ಮುಖ್ಯ ಅತಿಥಿಗಳಾಗಿ ತೇಜಸ್ ಇಂಟರ್ನ್ಯಾಷನಲ್ ಪಬ್ಲಿಕ್ ಸ್ಕೂಲಿನ ಆಡಳಿತಾಧಿಕಾರಿಯಾದ ಶ್ರೀ ಶ್ರೀರಂಗ ಖಾಸನೀಸ್ ಮತ್ತು ಮೆಡಿಕಲ್ ಕಾಲೇಜಿನ ಆಡಳಿತಾಧಿಕಾರಿ ಡಾ॥ ಶಿವಕುಮಾರ್ ಗಂಗಲ್ ವಹಿಸಿಕೊಂಡಿದ್ದರು. ಅತಿಥಿಗಳಾಗಿ ಡಾ॥ ವಿ ಎಸ್ ಚೌದರಿ,ಭರತ್ ಕುಮಾರ್ ಈಟಿ,ಸಚಿನ್ ಬಾತ್ರಾ ಹಾಗೂ ಎಂಎಂ ಜೋಶಿ ನೇತ್ರ ವಿಜ್ಞಾನ ಸಂಸ್ಥೆ ಹುಬ್ಬಳ್ಳಿ ಇದರ ವೈದ್ಯಾಧಿಕಾರಿಗಳಾದ ಡಾ॥ ಸಂಜೀವ ಕುಲಕರ್ಣಿ, ಡಾ॥ ಶ್ರೀನಿವಾಸ್, ಡಾಕ್ಟರ್ ನವೀನ್ , ಡಾ॥ ಅಭಿಷೇಕ್ ಜೊತೆಗೆ ಎಂಆರ್ ಎನ್ ಫೌಂಡೇಶನ್ ಸದಸ್ಯರಾದ ಮಲ್ಲಪ್ಪ ಇಂಗಳಿಗಿ ಹಾಗೂ ಕಾರ್ಯಕ್ರಮಕ್ಕೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಸರ್ವರೂ ಕಾರ್ಯಕ್ರಮದಲ್ಲಿ ಹಾಜರಿದ್ದರು. ಕಾರ್ಯಕ್ರಮವನ್ನು ಡಾ॥ವಿ ಎಸ್ ಚೌಧರಿ ನಿರೂಪಿಸಿದರು, ಕಾಲೇಜಿನ ಆಡಳಿತಾಧಿಕಾರಿ ಡಾ॥ ಶಿವಕುಮಾರ್ ಗಂಗಲ್ ವಂದಿಸಿದರು.